ಕರ್ನಾಟಕ ಸರ್ಕಾರ

(ತೋಟಗಾರಿಕೆ ಇಲಾಖೆ)

ಸಂ:ತೋಇ/ತೋಅನಿ(ತಾಬೆಯೋ)/ಸತೋನಿ(ಜೇಕೃ)/09/2019-20 ತೋಟಗಾರಿಕೆ ನಿರ್ದೇಶನಾಲಯ

ಲಾಲ್‌ಬಾಗ್, ಬೆಂಗಳೂರು-04,

ದಿನಾಂಕ:10.10.2019.

## ಸುತ್ತೋಲೆ

**ವಿಷಯ:-** 2019-20ನೇ ಸಾಲಿಗೆ ಭಾಗಮಂಡಲ ಜೇನುಗಾರಿಕೆ ತರಬೇತಿ ಕೇಂದ್ರದಲ್ಲಿ 3 ತಿಂಗಳ ಜೇನುಗಾರಿಕೆ ತರಬೇತಿಗೆ 20 ಅಭ್ಯರ್ಥಿಗಳನ್ನು (ಪುರುಷ ಅಭ್ಯರ್ಥಿಗಳು ಮಾತ್ರ) ಆಯ್ಕೆ ಮಾಡುವ ಕುರಿತು.

**** * *****

ತೋಟಗಾರಿಕೆ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಭಾಗಮಂಡಲ ಜೇನುಗಾರಿಕೆ ತರಬೇತಿ ಕೇಂದ್ರದಲ್ಲಿ 2019-20ನೇ ಸಾಲಿನಲ್ಲಿ ರಾಜ್ಯದಲ್ಲಿ ಇಲಾಖೆಯ ವತಿಯಿಂದ 20 ಜಿಲ್ಲೆಗಳ (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಬೀದರ್, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಗದಗ, ಹಾಸನ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ, ತುಮಕೂರು, ಉತ್ತರ ಕನ್ನಡ ಜಿಲ್ಲೆಗಳು ಮಾತ್ರ) ಅಭ್ಯರ್ಥಿಗಳಿಗೆ ದಿನಾಂಕ: 01-11-2019 ರಿಂದ 31-01-2020 ರವರೆಗೆ ರೈತರ ಮಕ್ಕಳಿಗೆ 3 ತಿಂಗಳ ಜೇನುಗಾರಿಕೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು. **ಸೂಚಿತ ಜಿಲ್ಲೆಗಳಿಂದ ಅಭ್ಯರ್ಥಿಗಳು ತರಬೇತಿಗೆ ಬಾರದ/ಹಾಜರಾಗದ ಪಕ್ಷದಲ್ಲಿ ಇತರೆ ಜಿಲ್ಲೆಗಳಿಂದ ಬೇಡಿಕೆ ಇದ್ದಲ್ಲಿ ಈ ಜಿಲ್ಲೆಗಳ ಸೂಕ್ತ ಅಭ್ಯರ್ಥಿಗಳನ್ನು ತರಬೇತಿಗೆ ಆಯ್ಕೆ ಮಾಡಿಕೊಳ್ಳಬಹುದಾಗಿದೆ.**

| | | |
|---|---|---|
| ಎ) | **ಅರ್ಜಿಗಳನ್ನು ಪಡೆಯುವಿಕೆ:** | ಅರ್ಜಿಗಳನ್ನು ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) / ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾವ) ರವರ ಕಛೇರಿಯಲ್ಲಿ ಅಥವಾ ಇಲಾಖೆ ವೆಬ್‌ಸೈಟ್ www.horticulture.karnataka.gov.in ನಲ್ಲಿ ದಿ: 17-10-2019 ರಿಂದ 26-10-2019 ರವರೆಗೆ ಡೌನ್‌ಲೋಡ್ ಮಾಡಿಕೊಳ್ಳಬಹುದು. |
| ಬಿ) | **ಅರ್ಜಿ ಶುಲ್ಕ :** | ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರ ಕಛೇರಿಯಲ್ಲಿ |

| | | |
|---|---|---|
| | | ಸಲ್ಲಿಸುವಾಗ ಅರ್ಜಿ ಶುಲ್ಕದ ಬಾಬ್ತು ಸಾಮಾನ್ಯ ಅಭ್ಯರ್ಥಿಗಳಿಗೆ ರೂ.20/-, ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ರೂ.10/ ಗಳ ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರ್ (IPO)/ ಡಿಮ್ಯಾಂಡ್ ಡ್ರಾಫ್ಟ್ (DD)ನ್ನು ಆಯಾಯ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರ ಹೆಸರಿನಲ್ಲಿ ಪಡೆದು, ಅರ್ಜಿ ಜೊತೆಗೆ ಲಗತ್ತಿಸಬೇಕು. |
| ಸಿ) | ಅರ್ಜಿಗಳನ್ನು ಸ್ವೀಕರಿಸಲು ಕೊನೆ ದಿನಾಂಕ: | 26-10-2019 |
| ಡಿ) | ಸಂದರ್ಶನ ಮಾಡುವ ದಿನಾಂಕ: | 28-10-2019 |
| ಇ) | ಆಯ್ಕೆ ಪಟ್ಟಿಯನ್ನು ಪ್ರಕಟಿಸುವುದು ಹಾಗೂ ಪ್ರವೇಶ ಪತ್ರ ನೀಡುವ ದಿನಾಂಕ: | 30-10-2019 |
| ಈ) | ಆಯ್ಕೆಯಾದ ಅಭ್ಯರ್ಥಿಗಳ ಅಂತಿಮ ಪಟ್ಟಿಯನ್ನು ಜೇನು ಕೃಷಿ ತರಬೇತಿ ಕೇಂದ್ರ, ಭಾಗಮಂಡಲ/ ನಿರ್ದೇಶನಾಲಯಕ್ಕೆ ಕಳುಹಿಸುವ ದಿನಾಂಕ: | 31-10-2019 |
| ಉ) | ಅಭ್ಯರ್ಥಿಗಳು ತರಬೇತಿಗೆ ಹಾಜರಾಗುವ ದಿನಾಂಕ : | 01-11-2019 |

## 1.ತರಬೇತಿಗೆ ಅರ್ಹತೆ :-

ಅಭ್ಯರ್ಥಿಗಳು ಕನಿಷ್ಟ ಎಸ್.ಎಸ್.ಎಲ್.ಸಿ.ಯಲ್ಲಿ ಉತ್ತೀರ್ಣರಾಗಿರಬೇಕು. ತರಬೇತಿ ಅಭ್ಯರ್ಥಿಗಳು 18 ರಿಂದ 35 ವರ್ಷ ವಯಸ್ಸಿನ ಪುರುಷ ಅಭ್ಯರ್ಥಿಗಳಾಗಿರಬೇಕು. ತರಬೇತಿ ಪ್ರವೇಶ ಬಯಸುವ ಅಭ್ಯರ್ಥಿಯ ತಂದೆ/ತಾಯಿ/ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ.

## 2.ತರಬೇತಿ ಅವಧಿ:-

ದಿನಾಂಕ:01-11-2019 ರಿಂದ 31-01-2020 ರವರೆಗೆ (3 ತಿಂಗಳ ತರಬೇತಿ) ತರಬೇತಿ ನೀಡಲಾಗುವುದು. ದಿನಾಂಕ 30-10-2010 ರೊಳಗಾಗಿ ಆಯ್ಕೆ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ವರದಿ

ಸಲ್ಲಿಸುವುದು. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ರೂ.1,250/-ಗಳ ಮಾಸಿಕ ಶಿಷ್ಯವೇತನ ನೀಡಲಾಗುವುದು.

**3.ಆಯ್ಕೆ ಸಮಿತಿ:-**

ಪ್ರತಿ ಜಿಲ್ಲೆಯಲ್ಲಿ ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ)ರವರು ಆಯ್ಕೆ ಸಮಿತಿ ಅಧ್ಯಕ್ಷರಾಗಿರುತ್ತಾರೆ. ಆಯಾ ಜಿಲ್ಲೆಯ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯ ವಲಯ) ರವರು ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು ಹಾಗೂ ತರಬೇತಿ ಕೇಂದ್ರದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ಸಹಾಯಕ ತೋಟಗಾರಿಕೆ ನಿರ್ದೇಶಕರು ಸದಸ್ಯರಾಗಿರುತ್ತಾರೆ.

**4. ಪ್ರಚಾರ:-**

3 ತಿಂಗಳ ತೋಟಗಾರಿಕೆ ತರಬೇತಿ ನಡೆಸುವ ಬಗ್ಗೆ ಪ್ರಚಾರ ನೀಡಲು ಸೂಕ್ತ ಕ್ರಮ ಕೈಗೊಳ್ಳುವುದು. ವಿವಿಧ ಕಛೇರಿಗಳ ನೋಟೀಸ್ ಬೋರ್ಡ್‌ನಲ್ಲಿ ಸಹ ಪ್ರಚಾರಗೊಳಿಸಲು ಸಂಬಂಧಿಸಿದ ಜಿಲ್ಲೆಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ರಾಜ್ಯವಲಯ) ಮತ್ತು ತರಬೇತಿ ಕೇಂದ್ರಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರು ಕ್ರಮ ತೆಗೆದುಕೊಳ್ಳತಕ್ಕದ್ದು.

**5. ಅರ್ಜಿ :-**

3 ತಿಂಗಳ ಜೇನುಗಾರಿಕೆ ತರಬೇತಿಯ ಅರ್ಜಿಗಳನ್ನು ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರ ಕಛೇರಿಯಲ್ಲಿ ಅಥವಾ ಇಲಾಖೆಯ ವೆಬ್‌ಸೈಟ್ www.horticulture.karnataka.gov.in ನಲ್ಲಿ ಪಡೆದು, ಭರ್ತಿ ಮಾಡಿರುವ ಅರ್ಜಿಯನ್ನು ಆಯಾ ತೋಟಗಾರಿಕೆ ಉಪ ನಿರ್ದೇಶಕರವರ ಕಛೇರಿಗೆ ನಿಗತ ದಿನಾಂಕದೊಳಗೆ ಸಲ್ಲಿಸಬೇಕು.

**6. ಅರ್ಜಿ ಶುಲ್ಕ:**

ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಆಯಾ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರ ಕಛೇರಿಯಲ್ಲಿ ಸಲ್ಲಿಸುವಾಗ ಅರ್ಜಿ ಶುಲ್ಕದ ಬಾಬ್ತು ಸಾಮಾನ್ಯ ಅಭ್ಯರ್ಥಿಗಳಿಗೆ ರೂ.20/- ಮತ್ತು ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ರೂ.10/-ಗಳನ್ನು ನಿಗಧಿಪಡಿಸಲಾಗಿದ್ದು, ಈ ಮೊತ್ತವನ್ನು ಇಂಡಿಯನ್ ಪೋಸ್ಟಲ್ ಆರ್ಡರ್ (IPO)/ ಡಿಮ್ಯಾಂಡ್ ಡ್ರಾಫ್ಟ್ (DD) ರೂಪದಲ್ಲಿ ಆಯಾಯ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರ ಹೆಸರಿನಲ್ಲಿ ಪಡೆದು, ಅರ್ಜಿಯ ಜೊತೆಗೆ ಲಗತ್ತಿಸಬೇಕು. ಅರ್ಜಿಗಳ ಜೊತೆ ಲಗತ್ತಿಸಿರುವ IPO/ DD ಗಳನ್ನು ಸರ್ಕಾರಕ್ಕೆ (ಲೆಕ್ಕ ಶೀರ್ಷಿಕೆ:

0401-00-800-2-01, ಸಸ್ಯ ಸಂಗೋಪನೆ, ಇತರೆ ಜಮೆಗಳು) ಜಮಾ ಮಾಡಲು ಕ್ರಮ ತೆಗೆದುಕೊಳ್ಳುವುದು.

**7. ಕರಾರು ಪತ್ರ:-**

ಅಭ್ಯರ್ಥಿಯು ತರಬೇತಿ ಮಧ್ಯದಲ್ಲಿ ಬಿಟ್ಟು ಹೋದಲ್ಲಿ ಅದುವರೆಗೂ ಅಭ್ಯರ್ಥಿಯು ಪಡೆದ ಶಿಷ್ಯ ವೇತನವನ್ನು ಸರ್ಕಾರಕ್ಕೆ ಜಮೆ ಮಾಡಬೇಕಾಗಿರುತ್ತದೆ. ಅಂತೆಯೇ ಈ ಷರತ್ತಿಗೆ ಒಪ್ಪಿಕೊಂಡು, ರೂ.20/-ರ ಛಾಪಾ ಕಾಗದ (ಸ್ಟಾಂಪ್ ಪೇಪರ್)ದಲ್ಲಿ ತರಬೇತಿಗೆ ಆಯ್ಕೆಯಾದ ಅಭ್ಯರ್ಥಿ ಹಾಗೂ ಅವರ ತಂದೆ ಅಥವಾ ಪೋಷಕರಿಂದ ಅಫಿಡವಿಟ್ ಅನ್ನು ಪಡೆದಿರಬೇಕು. ಸದರಿ ಅಫಿಡವಿಟ್‌ನಲ್ಲಿ ಸೇರಿಸಬೇಕಾದ ಇನ್ನಿತರೆ ತರಬೇತಿಯ ನಿಯಮಗಳನ್ನೊಳಗೊಂಡಂತೆ ಅಫಿಡವಿಟ್ ಮಾದರಿಯನ್ನು ಲಗತ್ತಿಸಿದೆ.

**8. ಮೂಲ ಪ್ರಮಾಣ ಪತ್ರಗಳನ್ನು ಭದ್ರಪಡಿಸುವುದು:-**

ಮೇಲಿನ ನಿಬಂಧನೆಗಳಿಗನುಸಾರವಾಗಿ ಆಯ್ಕೆಯಾದ ಅಭ್ಯರ್ಥಿಗಳನ್ನು ತರಬೇತಿಗೆ ಸೇರಿಸಿಕೊಳ್ಳುವಾಗ ಅವರಿಂದ ವಿದ್ಯಾರ್ಹತೆ ಮತ್ತು ಹುಟ್ಟಿದ ತಾರೀಖಿನ ಪ್ರಮಾಣ ಪತ್ರ ಮತ್ತು ಪಹಣಿ, ಜಾತಿ ಪ್ರಮಾಣ ಪತ್ರಗಳ ಮೂಲ ಪ್ರತಿ ಪಡೆದು ತರಬೇತಿ ಕೇಂದ್ರದ ಕಛೇರಿಯಲ್ಲಿ ಭದ್ರಪಡಿಸಿದ್ದು, ಅಭ್ಯರ್ಥಿಯು ಸರ್ಕಾರಕ್ಕೆ ಬೇಬಾಕಿಯಾಗಿ ತರಬೇತಿ ಕೇಂದ್ರ ಬಿಟ್ಟು ಹೋಗುವಾಗ ಮಾತ್ರ ಹಿಂದಿರುಗಿಸುವುದು.

**9.ತರಬೇತಿಯ ಸ್ಥಳ:-**

ತರಬೇತಿಗೆ ಸೇರುವ ಪ್ರತಿ ಅಭ್ಯರ್ಥಿಯೂ ತರಬೇತಿ ಕೇಂದ್ರದ ವಸತಿ ಗೃಹದಲ್ಲಿಯೇ ತಂಗುವುದು ಕಡ್ಡಾಯವಾಗಿರುತ್ತದೆ. ಅಭ್ಯರ್ಥಿಗಳಿಗೆ ಸೂಕ್ತ ತಂಗುವ ವ್ಯವಸ್ಥೆ ಕಲ್ಪಿಸುವುದು ಆಯಾ ತರಬೇತಿ ಕೇಂದ್ರದ ಮುಖ್ಯಸ್ಥರು ಹಾಗೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಲ್ಲಾ ಪಂಚಾಯತ್), ಮಡಿಕೇರಿರವರ ಜವಾಬ್ದಾರಿಯಾಗಿರುತ್ತದೆ.

**10. ಪರೀಕ್ಷೆಗೆ ಅರ್ಹತೆ :-**

ತರಬೇತಿ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಶೇಕಡಾ 75% ಕ್ಕಿಂತ ಕಡಿಮೆ (ವೈದ್ಯಕೀಯ ಆಧಾರದ ಮೇಲೆ 5 ದಿನಗಳೂ ಸೇರಿ) ಹಾಜರಾತಿ ಇದ್ದಲ್ಲಿ ಪರೀಕ್ಷೆಗೆ ಹಾಜರಾಗಲು ಅರ್ಹತೆ ಇರುವುದಿಲ್ಲ.

**11. ಭದ್ರತಾ ಠೇವಣಿ :-**

ತರಬೇತಿಗೆ ಸೇರುವ ಪ್ರತಿ ಅಭ್ಯರ್ಥಿಯಿಂದಲೂ ರೂ.500/-(ರೂ. ಐನೂರುಗಳು ಮಾತ್ರ) ಗಳನ್ನು ಭದ್ರತಾ ಠೇವಣಿಯಾಗಿ ಪಡೆದುಕೊಳ್ಳಬೇಕು. ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು

(ಜಿಪಂ), ಮಡಿಕೇರಿ ತಾಲ್ಲೂಕುರವರು ಶಿಷ್ಯವೇತನವನ್ನು ನಗದೀಕರಿಸುವಲ್ಲಿ ವಿಳಂಬವಾದ ಪಕ್ಷದಲ್ಲಿ ಈ ಮೊತ್ತವನ್ನು ವಿದ್ಯಾರ್ಥಿಗಳ ಮೆಸ್ ನಡೆಸಲು ಉಪಯೋಗಿಸಿಕೊಳ್ಳಬಹುದಾಗಿರುತ್ತದೆ. ನಂತರ ಆಯಾ ತಿಂಗಳು ಶಿಷ್ಯವೇತನ ನಗದೀಕರಿಸಿದ ಮೇಲೆ ಈ ಮೊತ್ತದಲ್ಲಿ ವೆಚ್ಚಗಳನ್ನು ಸರಿದೂಗಿಸಿಕೊಳ್ಳಬಹುದಾಗಿರುತ್ತದೆ ಹಾಗೂ ಸಂಬಂಧಿಸಿದ ವೆಚ್ಚಗಳ ದಾಖಲಾತಿಗಳನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಜಿಪಂ), ಮಡಿಕೇರಿರವರ ಕಛೇರಿಯಲ್ಲಿ ಇಟ್ಟುಕೊಳ್ಳುವುದು. ತರಬೇತಿ ಮುಗಿದ ನಂತರ ವಿದ್ಯಾರ್ಥಿಗಳಿಂದ ಸ್ವೀಕೃತಿ ಪಡೆದುಕೊಂಡು ಭದ್ರತಾ ಠೇವಣಿಯನ್ನು ಹಿಂದಿರುಗಿಸುವುದು.

**ವಿಶೇಷ ಸೂಚನೆ:-**

ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಮಿತಿಯು ಸರ್ಕಾರದ ಮೀಸಲಾತಿ ನಿಯಮವನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು ಹಾಗೂ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಮೀಸಲಾತಿ ಮುಗಿದ ನಂತರ ಉಳಿಕೆ ಮೀಸಲಾತಿಗಳನ್ನು ಇತರೆ ಅಭ್ಯರ್ಥಿಗಳಿಗೆ ನೀಡತಕ್ಕದ್ದು. ಒಂದು ವೇಳೆ ಮೀಸಲಾದ ಸ್ಥಾನಗಳಿಗೆ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಸಾಮಾನ್ಯ ಅಭ್ಯರ್ಥಿಗಳನ್ನು ಪರಿಗಣಿಸುವುದು.

2019-2020 ನೇ ಸಾಲಿನಲ್ಲಿ ತರಬೇತಿ ವಿದ್ಯಾರ್ಥಿಗಳ ಶಿಷ್ಯವೇತನ, ಶೈಕ್ಷಣಿಕ ಪ್ರವಾಸ, ಮಿನಿಕಿಟ್, ಪೂರಕ ತರಬೇತಿ ವೆಚ್ಚ, ಇತ್ಯಾದಿಗಳನ್ನು ಮಧುವನ ಹಾಗೂ ಜೇನು ಸಾಕಣೆ ಅಭಿವೃದ್ಧಿ ಯೋಜನೆಯಡಿ ಲೆಕ್ಕ ಶೀರ್ಷಿಕೆ: 2851-00-200-0-01 ರಲ್ಲಿ ಭರಿಸುವುದು.

ತೋಟಗಾರಿಕೆ ನಿರ್ದೇಶಕರು

ರವರಿಗೆ,

1.ತೋಟಗಾರಿಕೆ ಉಪ ನಿರ್ದೇಶಕರು, (ಜಿಪಂ), ________________ ಜಿಲ್ಲೆ ರವರ ಮಾಹಿತಿಗೆ ಹಾಗೂ ಮುಂದಿನ ಕ್ರಮಕ್ಕೆ.

2.ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, (ರಾವ), ________________ ಜಿಲ್ಲೆ ರವರ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕೆ.

3.ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು/ ಸಹಾಯಕ ತೋಟಗಾರಿಕೆ ನಿರ್ದೇಶಕರು, ________________ ಜೇನುಗಾರಿಕೆ ತರಬೇತಿ ಕೇಂದ್ರ, ______________ ತಾಲ್ಲೂಕು ________________ಜಿಲ್ಲೆ ರವರ ಮಾಹಿತಿಗೆ ಹಾಗೂ ಸೂಕ್ತ ಕ್ರಮಕ್ಕೆ.

# ಅನುಬಂಧ - 1

**2019-2020 ನೇ ಸಾಲಿನಲ್ಲಿ 3 ತಿಂಗಳ ಜೇನುಗಾರಿಕೆ ತರಬೇತಿಗೆ ಭಾಗಮಂಡಲ ಜೇನುಗಾರಿಕೆ ತರಬೇತಿ ಕೇಂದ್ರಕ್ಕೆ ನಿಗಧಿಪಡಿಸಿದ ಅಭ್ಯರ್ಥಿಗಳ ಗುರಿ**

| ಕ್ರ. ಸಂ. | ತರಬೇತಿ ಕೇಂದ್ರದ ಹೆಸರು | ಜಿಲ್ಲೆಗಳು | ಇತರೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಒಟ್ಟು |
|---|---|---|---|---|---|---|
| 1. | ಜೇನುಗಾರಿಕೆ ತರಬೇತಿ ಕೇಂದ್ರ, ಭಾಗಮಂಡಲ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ | ಬಳ್ಳಾರಿ | 1 | | | |
| | | ಬೆಂಗಳೂರು ನಗರ | 1 | | | |
| | | ಬೆಂಗಳೂರು ಗ್ರಾಮಾಂತರ | 1 | | | |
| | | ಚಾಮರಾಜನಗರ | | | 1 | |
| | | ಚಿಕ್ಕಬಳ್ಳಾಪುರ | 1 | | | |
| | | ಚಿಕ್ಕಮಗಳೂರು | | 1 | | |
| | | ದಕ್ಷಿಣ ಕನ್ನಡ | 1 | | | |
| | | ಗದಗ | 1 | | | |
| | | ಹಾಸನ | 1 | | | |
| | | ಕೊಡಗು | 1 | 1 | | |
| | | ಕೋಲಾರ | 1 | | | |
| | | ಕೊಪ್ಪಳ | 1 | | | |
| | | ಮಂಡ್ಯ | 1 | | | |
| | | ಮೈಸೂರು | 1 | | | |
| | | ರಾಮನಗರ | 1 | | | |
| | | ಶಿವಮೊಗ್ಗ | 1 | | | |
| | | ತುಮಕೂರು | 1 | | | |
| | | ಬೀದರ್ | 1 | | | |
| | | ಉತ್ತರ ಕನ್ನಡ | | 1 | | |
| | ಒಟ್ಟು | | 16 | 3 | 1 | 20 |

ತೋಟಗಾರಿಕೆ ನಿರ್ದೇಶಕರು

## ಕರ್ನಾಟಕ ಸರ್ಕಾರ

## ತೋಟಗಾರಿಕೆ ಇಲಾಖೆ

## 2019 - 2020 ನೇ ಸಾಲಿನ ಜೇನುಗಾರಿಕೆ ತರಬೇತಿಗೆ ಅರ್ಜಿ

| | | |
|---|---|---|
| 1 | ಅಭ್ಯರ್ಥಿಯ ಹೆಸರು | |
| 2 | ತಂದೆಯ ಹೆಸರು<br>(ತಂದೆ ಇಲ್ಲದಿದ್ದಲ್ಲಿ ತಾಯಿ ಅಥವಾ ಪೋಷಕರ ಹೆಸರು) | |
| 3 | ವರ್ಗ :- ಪ.ಜಾ:<br>ಪ.ಪಂ:<br>ಸಾಮಾನ್ಯ/ಇತರೆ:<br>(ಅಭ್ಯರ್ಥಿಯು ಪರಿಶಿಷ್ಟಜಾತಿ/ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರಿದ್ದರೆ ಆಯಾ ವರ್ಗದ ಬಗ್ಗೆ ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ಪಡೆದ ಸರ್ಟಿಫಿಕೇಟ್ ಲಗತ್ತಿಸಬೇಕು) | |
| 4 | ಅಭ್ಯರ್ಥಿಯ ಖಾಯಂ ಅಂಚೆ ವಿಳಾಸ | |
| 5 | ಹುಟ್ಟಿದ ದಿನಾಂಕ ಮತ್ತು ವಯಸ್ಸು | |
| 6 | ಎಸ್.ಎಸ್.ಎಲ್.ಸಿ.ಯಲ್ಲಿ ಪರೀಕ್ಷೆಯಲ್ಲಿ ಪಡೆದ ಅಂಕಗಳು:{ಅಭ್ಯರ್ಥಿಯು ತೇರ್ಗಡೆಯಾಗಿರುವ ಅಂಕಪಟ್ಟಿ ಲಗತ್ತಿಸಬೇಕು. (ಒಂದಕ್ಕಿಂತ ಹೆಚ್ಚಿನ ಪ್ರಯತ್ನಗಳಲ್ಲಿ ತೇರ್ಗಡೆಯಾಗಿರುವವರು ಕ್ರೋಢಿಕೃತ ಅಂಕಪಟ್ಟಿ ಲಗತ್ತಿಸಬೇಕು. ಪ್ರಯತ್ನವಾರು ಪಡೆದಿರುವ ಅಂಕಪಟ್ಟಿ ಒಪ್ಪಲಾಗದು)} | ಒಟ್ಟು ಅಂಕ:<br>ಪಡೆದ ಅಂಕ:<br>ಶೇ.ವಾರು: |
| 7 | ಅಭ್ಯರ್ಥಿಯ ತಂದೆ, ತಾಯಿ ಅಥವಾ ಪೋಷಕರ ಜಮೀನಿನ ವಿವರ, ಪಹಣಿ (RTC) ನೀಡುವುದು.<br>(ಇದರಲ್ಲಿ ತಂದೆ/ತಾಯಿ ಇಲ್ಲದಿದ್ದ ಪಕ್ಷದಲ್ಲಿ ಅಭ್ಯರ್ಥಿಗೂ ಜಮೀನು ಹೊಂದಿರುವವರಿಗೂ ಇರುವ ಸಂಬಂಧವನ್ನು ಗ್ರಾಮ ಲೆಕ್ಕಾಧಿಕಾರಿಯವರಿಂದ ದೃಢೀಕರಣ ಪತ್ರ ನೀಡುವುದು) | |
| 8 | ಅಭ್ಯರ್ಥಿಯು ತರಬೇತಿಗೆ ಸೇರುವ ಉದ್ದೇಶ | |
| 9 | ಇಂಡಿಯನ್ ಪೋಸ್ಟಲ್ ಆರ್ಡರ್ (IPO)/ ಡಿಮ್ಯಾಂಡ್ ಡ್ರಾಫ್ಟ್ (DD) ವಿವರಗಳು | IPO /DD ಸಂಖ್ಯೆ:<br>ದಿನಾಂಕ:<br>ಮೌಲ್ಯ: |

# ಅಫಿಡವಿಟ್ ಮಾದರಿ

ಮಾನ್ಯರೆ,

2019-20 ನೇ ಸಾಲಿನ ನವಂಬರ್ ತಿಂಗಳಿನಲ್ಲಿ ಪ್ರಾರಂಭವಾಗುವ ಜೇನುಗಾರಿಕೆ ತರಬೇತಿಗೆ ಪ್ರವೇಶ ಕೋರಿ ನನ್ನ ಮಗನಾದ ...................................................... ರವರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ತರಬೇತಿ ಕಾಲದಲ್ಲಿ ತರಬೇತಿಯ ಹಾಗೂ ವಿದ್ಯಾರ್ಥಿ ನಿಲಯದ ಎಲ್ಲಾ ನಿಯಮಗಳನ್ನು ನನ್ನ ಮಗ ಪರಿಪಾಲಿಸುತ್ತಾರೆಂದೂ, ಒಂದು ವೇಳೆ ಅವರಿಂದ ನಿಯಮಗಳ ಉಲ್ಲಂಘನೆಯಾದಲ್ಲಿ ಅದಕ್ಕೆ ತಗಲುವ ನಷ್ಟಗಳಿಗೆ ನಾನು ಹೊಣೆಯಾಗುತ್ತೇನೆಂದು ಈ ಮೂಲಕ ಒಪ್ಪಿರುತ್ತೇನೆ.

ಅಭ್ಯರ್ಥಿಯ ತಂದೆ/ತಾಯಿ ಸಹಿ      ಅಭ್ಯರ್ಥಿಯ ಸಹಿ      ಪೋಷಕರ ಸಹಿ

(ತಂದೆ/ತಾಯಿಇಲ್ಲದಿದ್ದಲ್ಲಿ ಮಾತ್ರ)

**ಸಾಕ್ಷಿಗಳ ಸಹಿ ಮತ್ತು ಪೂರ್ಣ ಅಂಚೆ ವಿಳಾಸ**

1.

2.

3.

# ತರಬೇತಿ ಕಾರ್ಯಕ್ರಮದ ಷರತ್ತು/ನಿಬಂಧನೆಗಳು

1. ಅರ್ಜಿಗಳನ್ನು ಇಲಾಖೆಯ ವೆಬ್‌ಸೈಟ್ **www.horticulture.kar.nic.in** ನಲ್ಲಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದೃಢೀಕರಣ ಮತ್ತು ಸರ್ಟಿಫಿಕೇಟ್‌ಗಳ ಸಹಿತವಾಗಿ ದಿನಾಂಕ:- 26-10-2019 ರೊಳಗೆ ಆಯಾ ಜಿಲ್ಲೆಯ ತೋಟಗಾರಿಕೆ ಉಪ ನಿರ್ದೇಶಕರು, (ಜಿ.ಪಂ) ಇವರ ಕಛೇರಿಗೆ ಸಲ್ಲಿಸಬೇಕು.
2. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವಾಗ ಅರ್ಜಿ ಶುಲ್ಕದ ಬಾಬ್ತು ಸಾಮಾನ್ಯ ಅಭ್ಯರ್ಥಿಗಳಿಗೆ ರೂ.20/- ಮತ್ತು ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ರೂ.10/-ಗಳನ್ನು ನಿಗದಿಪಡಿಸಲಾಗಿದ್ದು, ಈ ಮೊತ್ತವನ್ನು ಇಂಡಿಯನ್ ಪೋಸ್ಟಲ್ ಆರ್ಡರ್ (IPO)/ ಡಿಮ್ಯಾಂಡ್ ಡ್ರಾಫ್ಟ್ (DD) ರೂಪದಲ್ಲಿ ಆಯಾಯ ಜಿಲ್ಲೆಗಳ ತೋಟಗಾರಿಕೆ ಉಪ ನಿರ್ದೇಶಕರು (ಜಿಪಂ) ರವರ ಹೆಸರಿನಲ್ಲಿ ಪಡೆದು, ಅರ್ಜಿಯ ಜೊತೆಗೆ ಲಗತ್ತಿಸಬೇಕು.
3. ವಿದ್ಯಾರ್ಹತೆ: ಕನ್ನಡ ವಿಷಯಗಳೊಂದಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಿರಬೇಕು.
4. ಈ ತರಬೇತಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನು ಕನ್ನಡದಲ್ಲಿ ಮಾತ್ರ ಹೇಳಲಾಗುವುದು. ಆದ್ದರಿಂದ ಅಭ್ಯರ್ಥಿಯು ಕನ್ನಡ ಓದುವುದು, ಬರೆಯುವುದು ಹಾಗೂ ಮಾತನಾಡುವುದನ್ನು ತಿಳಿದಿರಬೇಕು.
5. ವಯೋಮಿತಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕನಿಷ್ಟ 18 ವರ್ಷ ಮತ್ತು ಗರಿಷ್ಟ 35 ವರ್ಷ ಮತ್ತು ಇತರರಿಗೆ ಕನಿಷ್ಟ 18 ವರ್ಷ ಮತ್ತು ಗರಿಷ್ಟ 30 ವರ್ಷ.
6. ಈ ತರಬೇತಿಯು ರೈತರ ಮಕ್ಕಳಿಗಾಗಿ ಇರುವುದರಿಂದ ಅಭ್ಯರ್ಥಿಯ ತಂದೆ ಅಥವಾ ಪೋಷಕರು ಕಡ್ಡಾಯವಾಗಿ ಜಮೀನು ಹೊಂದಿರಬೇಕು. ಹಾಗೂ ಸ್ವಂತ ಸಾಗುವಳಿ ಮಾಡುತ್ತಿರಬೇಕು. ಈ ಬಗ್ಗೆ ಪಹಣಿಯನ್ನು ನೀಡುವುದು ಕಡ್ಡಾಯವಾಗಿರುತ್ತದೆ. ಅಭ್ಯರ್ಥಿಗಳು ತೋಟದ ಕೆಲಸಗಳನ್ನು ಮಾಡುವಷ್ಟು ದೃಢಕಾಯರಾಗಿರಬೇಕು.
7. ತಮ್ಮ ಸ್ವಂತ ತೋಟಗಳನ್ನು ಜೇನುಕೃಷಿಯೊಂದಿಗೆ ಅಭಿವೃದ್ಧಿಪಡಿಸಬೇಕೆಂಬ ಅಭಿಲಾಷೆಯುಳ್ಳ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
8. ಅರ್ಜಿಯಲ್ಲಿ ಕೇಳಿರುವ ಎಲ್ಲಾ ವಿಷಯಗಳಿಗೂ ಪೂರ್ಣವಾದ ಮತ್ತು ಸರಿಯಾದ ವಿವರಣೆಯನ್ನು ಕೊಡಬೇಕು. 3ನೇ, 7ನೇ ಮತ್ತು 8ನೇ ಕಾಲಂಗಳಿಗೆ ಅಗತ್ಯವಾಗಿ ಬೇಕಾದ ಸರ್ಟಿಫಿಕೇಟ್‌ಗಳನ್ನು ಲಗತ್ತಿಸಬೇಕು. ಇಲ್ಲದಿದ್ದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.
9. ಈ ತರಬೇತಿಯ ಕಾಲಾವಧಿ 3 ತಿಂಗಳು. ತರಬೇತಿಯು ದಿನಾಂಕ: 01-11-2019 ರಿಂದ ಪ್ರಾರಂಭವಾಗಿ 31-01-2020 ಕ್ಕೆ ಅಂತ್ಯಗೊಳ್ಳುವುದು.
10. ತರಬೇತಿಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ರೂ.1,250/-ಗಳ ಮಾಸಿಕ ಶಿಷ್ಯವೇತನ ನೀಡಲಾಗುವುದು.

11. ಅಂತಿಮ ಪರೀಕ್ಷೆಗೆ ಕುಳಿತುಕೊಳ್ಳಲು ಕನಿಷ್ಟ ಶೇಕಡ 75% ರಷ್ಟು ಹಾಜರಾತಿ ಇರಲೇಬೇಕು (ವೈದ್ಯಕೀಯ ಆಧಾರದ ಮೇಲೆ 5 ದಿನಗಳೂ ಸೇರಿ).
12. ತರಬೇತಿ ಸಮಯದಲ್ಲಿ ಯಾವುದೇ ವಿದ್ಯಾರ್ಥಿಯಲ್ಲಿ ಅಶಿಸ್ತು, ದುರ್ನಡತೆಗಳು, ದುಶ್ಚಟಗಳು (ಮದ್ಯಪಾನ, ಧೂಮಪಾನ, ಇತ್ಯಾದಿ) ಕಂಡುಬಂದಲ್ಲಿ ಯಾವುದೇ ರೀತಿಯ ಸಮಜಾಯಿಷಿಯನ್ನು ನೀಡದೇ ತರಬೇತಿಯಿಂದ ಹೊರಗೆ ಹಾಕಲಾಗುವುದು.
13. ಅಭ್ಯರ್ಥಿಯು ತರಬೇತಿಯ ಮಧ್ಯದಲ್ಲಿ ಬಿಟ್ಟು ಹೋದರೆ ಅದುವರೆಗೂ ಪಡೆದಿರುವ ಶಿಷ್ಯ ವೇತನವನ್ನು ಹಿಂದಿರುಗಿಸಬೇಕಾಗುತ್ತದೆ.
14. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳು ಮೊಬೈಲ್ ಫೋನನ್ನು ಬಳಸುವಂತಿಲ್ಲ.
15. ಸರ್ಕಾರದ ಮೀಸಲಾತಿ ನಿಯಮಾವಳಿಗಳನ್ನು ಪಾಲಿಸಿ, ಮೆರಿಟ್ ಆಧಾರದ ಮೇಲೆ ಆಯ್ಕೆ ಪ್ರಕ್ರಿಯೆ ಕೈಗೊಳ್ಳಲಾಗುವುದು.

## ಭಾಗಮಂಡಲ ಜೇನುಗಾರಿಕೆ ತರಬೇತಿ ಕೇಂದ್ರದಲ್ಲಿನ ವಿದ್ಯಾರ್ಥಿ ನಿಲಯದ ನಿಯಮಗಳು

1. ಜೇನುಗಾರಿಕೆ ತರಬೇತಿ ಕೇಂದ್ರದಲ್ಲಿನ ವಿದ್ಯಾರ್ಥಿ ನಿಲಯವನ್ನು ಜೇನುಗಾರಿಕೆ ತರಬೇತಿ ವಿದ್ಯಾರ್ಥಿಗಳ ಊಟ ಮತ್ತು ವಸತಿ ಸೌಕರ್ಯಗಳಿಗಾಗಿಯೇ ತೆರೆಯಲಾಗಿದೆ.
2. ಈ ವಿದ್ಯಾರ್ಥಿ ನಿಲಯದ ಪೂರ್ಣ ಆಡಳಿತವು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿಪಂ), ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ ಇವರಿಗೆ ಸೇರಿದ್ದು, ವಸತಿ ಗೃಹದಲ್ಲಿ ಸ್ಥಳಗಳನ್ನು ಹಂಚುವ ಹಕ್ಕನ್ನು ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು ಇವರಿಗೆ ಕಾಯ್ದಿರಿಸಲಾಗಿದೆ ಮತ್ತು ಯಾವ ವಿದ್ಯಾರ್ಥಿಯೂ ಅವರ ಅನುಮತಿಯಿಲ್ಲದೇ ಹಂಚಿಕೆ ಮಾಡಿದ ಸ್ಥಳವನ್ನಾಗಲೀ, ವಸತಿಯನ್ನಾಗಲೀ ಬದಲಾಯಿಸಲು ಅವಕಾಶವಿರುವುದಿಲ್ಲ.
3. ಊಟಕ್ಕೆ ನಿಗಧಿತವಾದ ವೇಳೆಯನ್ನು ಎಲ್ಲಾ ವಿದ್ಯಾರ್ಥಿಗಳೂ ಕಟ್ಟುನಿಟ್ಟಾಗಿ ಅನುಸರಿಸಬೇಕು. ಇಲ್ಲದಿದ್ದಲ್ಲಿ ಅಂದಿನ ಊಟದ ಲಭ್ಯತೆ ಇರುವುದಿಲ್ಲ.
4. ಪ್ರತಿ ವಿದ್ಯಾರ್ಥಿಯೂ ರೂ.500/-ಗಳನ್ನು ಮುಂಗಡವಾಗಿ ಭದ್ರತಾ ಠೇವಣಿಯಾಗಿ ಕಟ್ಟಬೇಕು. ತರಬೇತಿ ಮುಗಿದ ನಂತರ ಈ ಹಣವನ್ನು ಹಿಂದಿರುಗಿಸಲಾಗುವುದು.
5. ಪ್ರತಿ ವಿದ್ಯಾರ್ಥಿಯೂ ತಮ್ಮ ವಸತಿ ಗೃಹವನ್ನು ಸದಾ ನಿರ್ಮಲವಾಗಿಯೂ, ಚೊಕ್ಕಟವಾಗಿಯೂ ಇಟ್ಟುಕೊಳ್ಳಬೇಕು.
6. ಯಾವ ವಿದ್ಯಾರ್ಥಿಯೂ ತರಬೇತಿ ಅವಧಿಯಲ್ಲಿ ವಿದ್ಯಾರ್ಥಿ ನಿಲಯದಿಂದ ಹೊರಗೆ ವಾಸಿಸಲು ಅವಕಾಶವಿರುವುದಿಲ್ಲ.
7. ವಿದ್ಯಾರ್ಥಿಗಳು ಎಲ್ಲಾ ಅಧಿಕಾರಿ/ಸಿಬ್ಬಂದಿ ವರ್ಗದವರಲ್ಲಿಯೂ ವಿನಯವಾಗಿ ನಡೆದುಕೊಳ್ಳಬೇಕು.
8. ಪ್ರತಿಯೊಬ್ಬ ವಿದ್ಯಾರ್ಥಿಯೂ ತನ್ನ ದಿನಚರಿ ಪುಸ್ತಕವನ್ನು ಇಟ್ಟುಕೊಳ್ಳಬೇಕು. ದಿನಚರಿ ಪುಸ್ತಕವನ್ನು ಪ್ರತಿನಿತ್ಯ ಬರೆದು ಪ್ರತಿ ತಿಂಗಳೂ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ತರಬೇತಿ ಕೇಂದ್ರ)ರವರ ಸಹಿ ಪಡೆಯಬೇಕು.
9. ವಸತಿ ಸೌಕರ್ಯವನ್ನು ಹೊರತುಪಡಿಸಿ, ಪ್ರತಿ ತಿಂಗಳೂ ಊಟಕ್ಕೆ ತಗಲುವ ವೆಚ್ಚವನ್ನು ಪ್ರತಿ ಮಾಹೆಯ ಶಿಷ್ಯವೇತನದ ಮೊತ್ತದಲ್ಲಿ ಕಡಿತಗೊಳಿಸಿ, ಉಳಿದ ಹಣವನ್ನು ವಿದ್ಯಾರ್ಥಿಗಳ ಹಾಜರಾತಿಯ ಆಧಾರದ ಮೇಲೆ ಅವರಿಗೆ ಹಂಚಲಾಗುವುದು.
10. ಯಾವ ವಿದ್ಯಾರ್ಥಿಯೂ ರಾತ್ರಿ 7.00 ಗಂಟೆಯ ನಂತರ ವಿದ್ಯಾರ್ಥಿ ನಿಲಯದಿಂದ ಹೊರಗಡೆ ಇರಲು ಅವಕಾಶವಿರುವುದಿಲ್ಲ.
11. ಯಾವುದೇ ವಿದ್ಯಾರ್ಥಿಯು ದುರ್ನಡತೆಯಿಂದ, ದುರಭಿಪ್ರಾಯದಿಂದಾಗಲೀ ನಿಯಮಗಳನ್ನು ಉಲ್ಲಂಘಿಸಿದಲ್ಲಿ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು.
12. ಸರ್ಕಾರಿ ಆಸ್ತಿ ಪಾಸ್ತಿಗಳಿಗೆ ವಿದ್ಯಾರ್ಥಿಗಳಿಂದ ನಷ್ಟ ಉಂಟಾದ ಪಕ್ಷದಲ್ಲಿ ಅಂತಹ ನಷ್ಟಗಳಿಗೆ ಕಾರಣರಾದ ವಿದ್ಯಾರ್ಥಿಗಳಿಂದ ನಷ್ಟದ ಹಣವನ್ನು ವಸೂಲಿ ಮಾಡಲಾಗುವುದು.

**ಓದಿ ತಿಳಿದಿದ್ದೇನೆ**

**ಅಭ್ಯರ್ಥಿಯ ತಂದೆ/ತಾಯಿ ಅಥವಾ ಪೋಷಕರ ಸಹಿ (ತಂದೆ/ತಾಯಿ ಇಲ್ಲದಿದ್ದಲ್ಲಿ ಮಾತ್ರ)**

**ಅಭ್ಯರ್ಥಿಯ ಸಹಿ**

# ಹಿಡುವಳಿ ದೃಢೀಕರಣ ಪತ್ರ

2019-2020 ನೇ ಸಾಲಿನ ಜೇನುಗಾರಿಕೆ ತರಬೇತಿಗೆ ಅರ್ಜಿ ಹಾಕಿಕೊಳ್ಳುತ್ತಿರುವ ಶ್ರೀ............................. .............. .......................................... ಇದೇ ಹೆಸರಿನಲ್ಲಿ/ ತಂದೆ ಹೆಸರಿನಲ್ಲಿ / ತಾಯಿ ಹೆಸರಿನಲ್ಲಿ ಅಥವಾ ಪೋಷಕರ ಹೆಸರಿನಲ್ಲಿ ಈ ಕೆಳಕಂಡಂತೆ ಜಮೀನುಗಳು ಇರುತ್ತವೆಂದು ದೃಢೀಕರಿಸಲಾಗಿದೆ.

| ಕ್ರ.ಸಂ | | | |
|---|---|---|---|
| 1. | ತಂದೆಯ ಹೆಸರಿನಲ್ಲಿ | | |
| 2. | ತಾಯಿಯ ಹೆಸರಿನಲ್ಲಿ | | |
| 3. | ಪೋಷಕರ ಹೆಸರಿನಲ್ಲಿ | | |
| | ಒಟ್ಟು ವಿಸ್ತೀರ್ಣ | | |

## ಸೂಚನೆ:-

ಪೋಷಕರ ಹೆಸರಿನಲ್ಲಿದ್ದರೆ ಯಾವ ರೀತಿಯಲ್ಲಿ ಪೋಷಕರೆಂಬುದನ್ನು ಗ್ರಾಮ ಲೆಕ್ಕಾಧಿಕಾರಿಗಳು ದೃಢೀಕರಿಸಬೇಕು.

ಗ್ರಾಮ ಲೆಕ್ಕಾಧಿಕಾರಿಗಳ ಸಹಿ ಮತ್ತು
ಪದನಾಮ ಮೊಹರು